

# ನಮ್ಮ ಸುರಕ್ಷತೆ ನಮ್ಮ ಕೈಯ್ಯಲ್ಲಿ..

**ಮಹಿಳೆ ಅಬಲೆಯಲ್ಲ ಸಬಲೆ. ಆದರೆ ಕೆಲವು ವಿಕೃತ ಮನಸ್ಸಿನ ಪುರುಷರಿಂದಾಗಿ ಮಹಿಳೆಗೆ ಅಸಹಾಯಕ ಪರಿಸ್ಥಿತಿ ಬಂದೊದಗುತ್ತದೆ. ಇತ್ತೀಚಿನ ಕೆಲವು ಘಟನೆ ಗಮನಿಸಿದಾಗ ಮಹಿಳೆಯ ದುಡುಕುತನ, ಬೇಜವಾಬ್ದಾರಿ ಲೈಂಗಿಕ ಕಿರುಕುಳಕ್ಕೆ ಪೂರಕ ಎನ್ನುವುದು ಗಮನಾರ್ಹ. ಇದಕ್ಕೆ ಕಾರಣಗಳೇನು? ಮುಂಜಾಗ್ರತೆ ಹೇಗೆ ವಹಿಸಬಹುದು ಮುಂತಾದ ಉಪಯುಕ್ತ ಮಾಹಿತಿಗಳ ಮೇಲೆ ಈ ಲೇಖನ ಬೆಳಕು ಚೆಲ್ಲಿದೆ.**

■ **ಡಾ.ಎಂ.ಡಿ. ಸೂರ್ಯಕಾಂತ**

ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ಘಟನೆ ಇದು. ಹದಿಮೂರು ವರ್ಷದ ಮಗಳಿರುವ ಮಹಿಳೆ ಹಾಗೂ 30 ವರ್ಷದ ದೆಹಲಿ ನಿವಾಸಿ, ಕಿರುತೆರೆ ನಟ, ಫೇಸ್‌ಬುಕ್ ಮೂಲಕ ಸ್ನೇಹಿತರಾಗುತ್ತಾರೆ. ನಿತ್ಯ ಇವರಿಬ್ಬರೂ ತಡ ರಾತ್ರಿವರೆಗೆ ಚಾಟಿಂಗ್ ಮಾಡುತ್ತಾರೆ. ಪರಸ್ಪರ ಒಪ್ಪಿಗೆ ಮೇರೆಗೆ ದೈಹಿಕ ಸಂಪರ್ಕ ನಡೆದು, ಇದು ಆರು ತಿಂಗಳು ಮುಂದುವರೆಯುತ್ತದೆ. ಪತಿಗೆ ಗೊತ್ತಾಗದಂತೆ,15 ಲಕ್ಷದ ಚಿನ್ನಾಭರಣ, 3 ಲಕ್ಷ ಹಣ ಈ ಸ್ನೇಹಿತನಿಗೆ ನೀಡುತ್ತಾಳೆ. ಈತನ ಹಣದ ದಾಹ ತೀರದಾಗ, ಜೊತೆಗೆ ತೆಗೆಸಿಕೊಂಡ ಫೋಟೋಗಳನ್ನು ಪತಿಗೆ ತೋರಿಸಿ ಮರ್ಯಾದೆ ತೆಗೆಯುವುದಾಗಿ ಹೆದರಿಸುತ್ತಾನೆ. ಆಗ ಈ ಮಹಿಳೆ ಈ ನಟನ ವಿರುದ್ಧ ಅತ್ಯಾಚಾರದ ಆರೋಪ ನೀಡುತ್ತಾಳೆ.

* * *

ಇನ್ನೊಂದು ಘಟನೆ ಗಮನಿಸಿ. ಟೆನಿಸ್ ಕಲಿಯುವ ಆಸಕ್ತಿಯ 30 ವರ್ಷದ ವಿವಾಹಿತೆ, ಎಂಜಿನಿಯರಿಂಗ್ ಪದವೀಧರೆ ಸಂಜೆ ಆರು ಗಂಟೆಗೆ ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿರುವ ಟೆನಿಸ್ ಸಂಸ್ಥೆಗೆ ಬರುತ್ತಾಳೆ. ತಡವಾಗಿದ್ದರಿಂದ ಬೆಳಿಗ್ಗೆ ಬರಲು ಸಿಬ್ಬಂದಿ ಹೇಳುತ್ತಾರೆ. ಆದರೆ ಈಕೆ ಉದ್ಯಾನದಲ್ಲಿ ತಂಗುತ್ತಾಳೆ. ಪೋಲಿಸರು ಹೊರಗೆ ಹೋಗಲು ಹೇಳಿದರೂ, ತಿರುಗಿ ಬಂದು ಉದ್ಯಾನದಲ್ಲಿ ಉಳಿಯುತ್ತಾಳೆ. ಕಬ್ಬನ್ ಪಾರ್ಕ್ ಕಾವಲುಗಾರರು ಅತ್ಯಾಚಾರವೆಸಗಿದರು ಎಂದು ದೂರುತ್ತಾಳೆ.

ದೂರದ ಮುಂಬಯಿಯಲ್ಲೂ ನಡೆದಿದೆ ಇಂಥದೇ ಘಟನೆ. ಹದಿನಾರು ವರ್ಷದ ಯುವತಿ ತನ್ನ ಸ್ನೇಹಿತೆಯ ಮನೆಗೆ ಹೋಗುತ್ತೇನೆಂದು ಹೆತ್ತವರಿಗೆ ಸುಳ್ಳು ಹೇಳಿ, ಸ್ನೇಹಿತನ ಮನೆಗೆ ರಾತ್ರಿ 10 ಗಂಟೆಗೆ ಬರುತ್ತಾಳೆ. ಈ ಸ್ನೇಹಿತ,ಈತನ 5 ಜನ ಸಂಗಾತಿಗಳು ಹಾಗೂ ಈಕೆ ಮದ್ಯಪಾನ ಸೇವಿಸಿ ಪಾರ್ಟಿ ಮಾಡುತ್ತಾರೆ. ಈ ಸ್ನೇಹಿತ ಹಾಗೂ ಈತನ ಜೊತೆಗಿದ್ದವರು 3 ಗಂಟೆ ಲೈಂಗಿಕ ಕಿರುಕುಳ ನೀಡಿದರೆಂದು ದೂರುತ್ತಾಳೆ.

* * *